ಕೊಡಚಾದ್ರಿ ಬೆಟ್ಟದ ತಪ್ಪಲಿನಲ್ಲಿ ವನೌಷಧಿ ತೋಟ ನಿರ್ಮಾಣ

೧೪೨೨ (೫೮೪) ಶ್ರೀ ಪಟಮಕ್ಕಿ ರತ್ನಾಕರ್ (ತೀರ್ಥಹಳ್ಳಿ).—ಮಾನ್ಯ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

೧) ಕೊಡಚಾದ್ರಿ ಬೆಟ್ಟದ ತಪ್ಪಲಲ್ಲಿ ವನೌಷಧಿ ತೋಟವನ್ನು ನಿರ್ಮಿಸಲು ಸರ್ಕಾರದವರು ನಿರ್ಧರಿಸಿರುವರೆ ?

೨) ಹಾಗಿದ್ದಲ್ಲಿ ಆ ಬಗ್ಗೆ ಸಾಧಿಸಲಾಗಿರುವ ಪ್ರಗತಿ ಏನು ? ಹಾಗೂ ಈವರೆಗೆ ತೊಡಗಿಸಲಾಗಿರುವ ಹಣದ ಮೊತ್ತವೆಷ್ಟು ?

ಪೂರಕ ಟಿಪ್ಪಣಿ

ಸರ್ಕಾರದಿಂದ ಈವರೆವಿಗೆ ಕೊಡಚಾದ್ರಿ ಬೆಟ್ಟದ ತಪ್ಪಲಲ್ಲಿ ವನೌಷಧ ತೋಟವನ್ನು ನಿರ್ಮಿಸಲು ಯಾವ ವಿಧವಾದ ನಿರ್ಧಾರವನ್ನೂ ತೆಗೆದುಕೊಂಡಿಲ್ಲ.

ಡಾ॥ ಹೆಚ್. ಎಲ್. ತಿಮ್ಮೇಗೌಡ (ಆರೋಗ್ಯ ಮಂತ್ರಿಗಳು).

೧) ಇಲ್ಲಾ

೨) ಉದ್ಭವಿಸುವುದಿಲ್ಲ

ಹೊಸನಗರ ತಾಲ್ಲೂಕಿನಲ್ಲಿ ಆಸ್ಪತ್ರೆ ಸಿಬ್ಬಂದಿ ವರ್ಗಕ್ಕೆ ವಸತಿ ಸೌಕರ್ಯ ಒದಗಿಸುವ ಬಗ್ಗೆ

೧೪೩೩ (೫೭೦) ಶ್ರೀ ಪಟಮಕ್ಕಿ ರತ್ನಾಕರ್ (ತೀರ್ಥಹಳ್ಳಿ).—ಮಾನ್ಯ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

೧) ಹೊಸನಗರ ತಾ. ನಗರ ಗ್ರಾಮದಲ್ಲಿ ಆಸ್ಪತ್ರೆಯ ಸಿಬ್ಬಂದಿ ವರ್ಗಕ್ಕೆ ವಸತಿ ಸೌಲಭ್ಯ ನಿರ್ಮಿಸಲು ಸರ್ಕಾರದವರು ನಿವೇಶನವನ್ನು ಪಡೆದಿದ್ದಾರೆಯೇ ?

೨) ಹಾಗಿದ್ದಲ್ಲಿ ಗೃಹನಿರ್ಮಾಣ ಕಾರ್ಯ ಪ್ರಾರಂಭವಾಗದಿರಲು ಕಾರಣವೇನು ? ಮತ್ತು ಯಾವಾಗ ಪ್ರಾರಂಭ ಮಾಡಲಾಗುವುದು ?

ಡಾ॥ ಎಚ್ .ಎಲ್. ತಿಮ್ಮೇಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು).—

೧) ಹೌದು.

೨) ಕರ್ನಾಟಕ ಗೃಹ ನಿರ್ಮಾಣ ಮಂಡಲಿಯವರಿಂದ ಸಾಲ ಪಡೆದು, ಆಸ್ಪತ್ರೆಗಳ ಸಿಬ್ಬಂದಿ ವರ್ಗಕ್ಕೆ ವಸತಿ ಗೃಹಗಳನ್ನು ನಿರ್ಮಿಸಲು, ಪ್ರಯತ್ನಿಸುತ್ತಿದ್ದೇವೆ.

ಪೋಲೀಸ್ ಇಲಾಖೆಯಲ್ಲಿ ಹರಿಜನರ ಗಿರಿಜನರ ಅಧಿಕಾರಿಗಳ ಬಡ್ತಿ ಬಗ್ಗೆ

೧೪೪೪ (೪೪೭) ಶ್ರೀ ಬಿ. ಎಸ್. ಶಿವಸಂಜಪ್ಪ (ಗುಬ್ಬಿ).—ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ತುಮಕೂರು ಜಿಲ್ಲೆಯ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವ ಹರಿಜನ ಗಿರಿಜನ ಪೋಲೀಸ್ ಪೇದೆ ಮತ್ತು ಮುಖ್ಯ ಪೇದೆಗಳಿಗೆ ಮುಂಬಡ್ತಿ ಕೊಡದೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಎಲ್ಲ ಅರ್ಹತೆಗಳನ್ನು ಹೊಂದಿದ್ದಾಗ್ಯೂ ಸಹ ಬಡ್ತಿ ಕೊಡದೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಇ) ಹಾಗಿದ್ದಲ್ಲಿ, ಈ ಬಗ್ಗೆ ಕೈಕೊಂಡಿರುವ ಕ್ರಮವೇನು ?

ಶ್ರೀ ಬಿ. ರಾಚಯ್ಯ (ಗೃಹ ಮಂತ್ರಿಗಳು).—

ಅ) ಇಲ್ಲ

ಆ) ಮೇಲಿನ 'ಅ' ಪ್ರಶ್ನೆಗೆ ಕೊಟ್ಟಿರುವ ಉತ್ತರದಿಂದ ಇದಕ್ಕೆ ಉತ್ತರವಿಲ್ಲ.

ಇ) ಮೇಲಿನ 'ಅ' ಪ್ರಶ್ನೆಗೆ ಕೊಟ್ಟಿರುವ ಉತ್ತರದಿಂದ ಇದಕ್ಕೆ ಉತ್ತರವಿಲ್ಲ.

ಹೊನ್ನಾಳಿಯಲ್ಲಿ ೩೦ ಹಾಸಿಗೆಗಳುಳ್ಳ ಸಾರ್ವತ್ರಿಕ ಆಸ್ಪತ್ರೆಯನ್ನು ತೆರೆಯುವ ಬಗ್ಗೆ

೧೪೫ (೫೭೧) ಶ್ರೀ ಡಿ. ಜಿ. ಬಸವನಗೌಡ (ಹೊನ್ನಾಳಿ).—ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) ಹೊನ್ನಾಳಿ ಟೌನಿನಲ್ಲಿ ೩೦ ಹಾಸಿಗೆಗಳುಳ್ಳ ಸಾರ್ವತ್ರಿಕ ಆಸ್ಪತ್ರೆಯನ್ನು ಮಂಜೂರು ಮಾಡ ಬೇಕೆಂದು ಮನವಿಗಳು ಬಂದಿದ್ದರೂ ಸಹ ಅದನ್ನು ಪ್ರಾರಂಭಿಸದಿರಲು ಕಾರಣಗಳೇನು ?

ಆ) ಪ್ರಸಕ್ತ ವರ್ಷದಲ್ಲಾದರೂ ಸರಕಾರದವರು ಸದರಿ ಆಸ್ಪತ್ರೆಯನ್ನು ಮಂಜೂರು ಮಾಡುವರೇ ?

ಡಾ॥ ಹೆಚ್. ಎಲ್. ತಿಮ್ಮೇಗೌಡ (ಆರೋಗ್ಯ ಮಂತ್ರಿಗಳು).—

ಅ) ತಾಲ್ಲೂಕು ಮಟ್ಟದ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ೩೦ ಹಾಸಿಗೆಗಳ ಮತ್ತು ಉಪ ವಿಭಾಗ ಮಟ್ಟದ ಆಸ್ಪತ್ರೆಗಳನ್ನು ೫೦ ಹಾಸಿಗೆಗಳ ಜನರಲ್ ಆಸ್ಪತ್ರೆಗಳನ್ನಾಗಿ ಮೇಲ್ದರ್ಜೆಗೇರಿಸ ಬೇಕೆಂದು ಸರ್ಕಾರದ ನೀತಿಯಾಗಿರುತ್ತದೆ. ಈ ಪ್ರಕಾರ ರಾಜ್ಯದಲ್ಲಿ ಉಳಿದಿರುವ ೪೬ ತಾಲ್ಲೂಕು ಮಟ್ಟದಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಹಂತ ಹಂತವಾಗಿ ಮೆಲ್ದರ್ಜೆಗೇರಿಸಲಾಗುವುದು ಈ ೪೬ ತಾಲ್ಲೂಕುಗಳಲ್ಲಿ ಹೊನ್ನಾಳಿ ಟೌನ್ ಸೇರಿರುತ್ತದೆ ಹಣಕಾಸಿನ ಮಿತಿಯಿಂದಾಗಿ ಈ ಆಸ್ಪತ್ರೆ ಯನ್ನು ಮೇಲ್ದರ್ಜೆಗೇರಿಸಲು ಸಾಧ್ಯವಾಗಿಲ್ಲ. ಪ್ರಯತ್ನ ಮಾಡಲಾಗುವುದು.

ಪ್ರವಾಸೋದ್ಯಮ ಕೇಂದ್ರವಾಗಿ ಕಾರವಾರ

೧೪೬ (೬೫೯) ಶ್ರೀ ಪ್ರಭಾಕಾರ್ ರಾಣೆ (ಕಾರವಾರ).—ಮಾನ್ಯ ವಾರ್ತಾ ಹಾಗೂ ಯುವಜನ ಸೇವೆ ಹಾಗೂ ಕ್ರೀಡಾ ಪ್ರವಾಸೋದ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) ಕಾರವಾರವನ್ನು ಪ್ರವಾಸೋದ್ಯಮ ಕೇಂದ್ರವನ್ನಾಗಿ ಅಭಿವೃದ್ಧಿಪಡಿಸುವ ವಿಚಾರ ಸರ್ಕಾರಕ್ಕೆ ಇದೆಯೇ ?

ಆ) ಹಾಗಿದ್ದಲ್ಲಿ ಅದಕ್ಕಾಗಿ ಸರ್ಕಾರದವರು ಹಾಕಿಕೊಂಡ ಯೋಜನೆಗಳೇನು ?

ಡಾ। ಜೀವರಾಜ ಆಳ್ವ (ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವಾ ಮತ್ತು ಕನ್ನಡ ಮತ್ತು ಸಂಸ್ಕೃತಿ ಹಾಗೂ ಕ್ರೀಡಾ ರಾಜ್ಯ ಸಚಿವರು).—

ಅ) ಇದೆ.

ಆ) ಪ್ರವಾಸೋದ್ಯಮ ಇಲಾಖೆಯು ೧೯೮೫-೮೬ರ ಸಾಲಿನಲ್ಲಿ ನಾಲ್ಕು ಲಕ್ಷ ರೂಪಾಯಿಗಳನ್ನು ಪಶ್ಚಿಮ ಕರಾವಳಿ ಪ್ರದೇಶದ ಅಭಿವೃದ್ಧಿಗಾಗಿ ನಿಗದಿಮಾಡಲಾಗಿದೆ.

ಭಟ್ಕಳ ಆರಕ್ಷಕ ಠಾಣೆಯಲ್ಲಿ ದಾಖಲಾದ ಕಳ್ಳತನದ ಪ್ರಕರಣಗಳು

೧೪೭ (೩೩೦) ಶ್ರೀ ಆರ್.ಎನ್. ನಾಯ್ಕ (ಭಟ್ಕಳ).—ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ಭಟಕಲ್ ಆರಕ್ಷಕ ಠಾಣೆಯಲ್ಲಿ ೧೯೮೪-೮೫ನೇ ಸಾಲಿನಲ್ಲಿ ಮತ್ತು ೧೯೮೫ನೇ ಸಾಲಿನ ಪ್ರಾರಂಭದಿಂದ ಕಳ್ಳತನದ ಅಪಾದನೆಯ ಮೇಲೆ ದಾಖಲಾದ ಪ್ರಕರಣಗಳ ಸಂಖ್ಯೆ ಎಷ್ಟು ?